# ಸಹನಾ ಮೌಲ್ಯ

ಸಹನೆಯೆಂದರೆ ತಾಳ್ಮೆ, ಸೈರಣೆ. ಮತ್ತೊಬ್ಬ ವ್ಯಕ್ತಿಯ ಅಥವಾ ಮತ್ತೊಂದು ಸಿದ್ಧಾಂತದ ಅಭಿಪ್ರಾಯಗಳನ್ನು, ಜೀವನ ವಿಧಾನಗಳನ್ನು ಅಸಹಿಸಿಕೊಳ್ಳದೇ ತಾಳುವ ಪ್ರವೃತ್ತಿ. ಈ ತಾಳುವಿಕೆ ಎನ್ನುವುದು ವ್ಯಕ್ತಿಯ ದೌರ್ಬಲ್ಯವಲ್ಲ, ಅದು ಅವನ ಶಕ್ತಿ; ತಾಳುವಿಕೆ ಎನ್ನುವುದು ಅನ್ಯ ಅಭಿಪ್ರಾಯ ಅಥವಾ ಸಿದ್ಧಾಂತವನ್ನು ಒಪ್ಪಿಕೊಳ್ಳುವ ಸೂಚನೆಯೂ ಅಲ್ಲ, ಬದುಕಿನಲ್ಲಿ ಅರಿಯುವ, ವಿಮರ್ಶಿಸುವ, ತುಲನೆಮಾಡಿ ನಿರ್ಣಯಿಸುವ ಒಂದು ಮನೋನೆಲೆ. ಒಬ್ಬ ವ್ಯಕ್ತಿಯ ತಾಳುವಿಕೆ ಎಷ್ಟು ಗಟ್ಟಿಯಾಗಿರುತ್ತದೋ ಅಷ್ಟರಮಟ್ಟಿಗೆ ಅವನು ಸೌಹಾರ್ದ ಗುಣಯುಕ್ತನಾಗುತ್ತಾನೆ, ಮನುಷ್ಯಪ್ರೇಮಿಯಾಗುತ್ತಾನೆ.

ಅಸಹನೆಯೆಂಬುದು ಅಹಂಕಾರದ ಸಂಕೇತ. ತಾನೇ ಸರಿ, ತನ್ನ ತಿಳಿವಳಿಕೆಯೇ ಶ್ರೇಷ್ಠತಮ, ಆ ತಿಳಿವಳಿಕೆಯ ನಡೆನುಡಿಯಂತೆಯೇ ಎಲ್ಲವೂ ನಡೆಯಬೇಕು, ಆಗ ಮಾತ್ರ ಎಲ್ಲವೂ ಸರಿಯಾಗಿರುತ್ತದೆ ಎಂಬ ಅರೆಜ್ಞಾನದ ಸೃಷ್ಟಿಯೇ ಅಸಹನೆ. ಸಹನೆ– ಅಸಹನೆಗಳು ವ್ಯಕ್ತಿ ವ್ಯಕ್ತಿಯ ನಡುವೆ; ಸಾಮಾಜಿಕ–ಕೌಟುಂಬಿಕ ಬದುಕಿನ ನಡುವೆ ಅಭಿವ್ಯಕ್ತಗೊಳ್ಳುವ ವರ್ತನಾ ರೂಪದ ನಡವಳಿಕೆಗಳು. ಸಹನೆಯ ಮನೋಧರ್ಮವಿದ್ದರೆ ಕಲಿಕೆ ಪ್ರಾರಂಭವಾಗುತ್ತದೆ, ದೃಷ್ಟಿ ವಿಶಾಲವಾಗುತ್ತದೆ. ಅಸಹನೆಯ ಮನಸ್ಥಿತಿಯಿದ್ದರೆ ಕಲಹ ಪ್ರಾರಂಭವಾಗುತ್ತದೆ, ವ್ಯಕ್ತಿಗಳ– ಸಾಮಾಜಿಕ ಸಂಬಂಧಗಳ ನಡುವೆ ಗೋಡೆ ನಿರ್ಮಾಣವಾಗುತ್ತದೆ; ಒಟ್ಟಾರೆ ಸುತ್ತಲ ವಾತಾವರಣದಲ್ಲಿ ಅಶಾಂತಿ ಮೂಡುತ್ತದೆ.

ಕೌಟುಂಬಿಕ ನೆಲೆಯಲ್ಲಿ ಅತ್ತೆಗೆ ತನ್ನ ಅನುಭವವೇ ಶ್ರೇಷ್ಠವೆಂಬ ಅಹಂಕಾರವಾದರೆ, ಸೊಸೆಗೆ ತನ್ನ ಆಧುನಿಕ ತಿಳಿವಳಿಕೆಯೇ ಉತ್ತಮವೆಂಬ ಅಹಂಕಾರ! ಮಗನಿಗೆ ಅಪ್ಪನ ಆದರ್ಶ ಕೆಲಸಕ್ಕೆ ಬಾರದ್ದು ಎನ್ನಿಸಿದರೆ, ಅಪ್ಪನಿಗೆ ಮಗ ಬದುಕು ಕಲಿಯದೆ ಸುಖದಲ್ಲಿ ಕಾಲಕಳೆಯುತ್ತಾನೆಂಬ ಕೋಪ, ಅಸಹನೆ. ಸೊಸೆಯ ಹೊಸತನದ ಒಳನೋಟವನ್ನು ಪ್ರೀತಿಯಿಂದ ಆಲಿಸಿ, ತನ್ನ ಅನುಭವ ತುಲನೆಯಲ್ಲಿ ಅದಕ್ಕೊಂದು ಹೊಳಪು ನೀಡಿ ಉತ್ತೇಜಿಸಿದರೆ ಪ್ರೀತಿ ಮೂಡುತ್ತದೆ, ನಗು ಅರಳುತ್ತದೆ. ತನ್ನ ತಾಯಿ ತಿದ್ದಿ ಬುದ್ಧಿ ಹೇಳಿದಾಗ ಬಾರದ ಕೋಪ ಅತ್ತೆ ಹೇಳಿದಾಗ ಏಕೆ ಬರುತ್ತದೆಯೆಂದು ಸೊಸೆ ಆತ್ಮಾವಲೋಕನ ಮಾಡಿಕೊಂಡಾಗ, ಅತ್ತೆಯ ಮಾತು ಸಹ್ಯವಾಗಿ ಹೃದಯದ ಬಾಗಿಲು ತೆರೆದುಕೊಳ್ಳುತ್ತದೆ. ಹೊಸ ತಿಳಿವಳಿಕೆಗೆ ಹಳೆಯ ಅನುಭವದ ಬುನಾದಿ ಸಂಸಾರವನ್ನು ಗಟ್ಟಿಗೊಳಿಸುತ್ತದೆಯೆಂಬ ವಿವೇಚನೆ ಹೊಸತಲೆಮಾರಿಗೆ ಬೇಕು. ನಾವು ಏನಂದರೂ ಅಸಭ್ಯವಾಗಿ ವರ್ತಿಸಿದರೂ ದಾರಿತಪ್ಪಿದರೂ ಹೆತ್ತವರು ಏಕೆ ಸಹಿಸಿಕೊಳ್ಳುತ್ತಾರೆಂದು ಮಕ್ಕಳು ತಾಳ್ಮೆಯಿಂದ ಮನನ ಮಾಡಬೇಕು. ರಕ್ತಸಂಬಂಧದ ಬೆಸುಗೆಯೊಂದೇ ಅವರ ಸಹನೆಗೆ ಕಾರಣವಲ್ಲ; ಅವರ ಬದುಕಿನ ಗಟ್ಟಿತನ ಅವರನ್ನು ಹಾಗೆ ರೂಪಿಸಿರುತ್ತದೆ ಎಂಬುದನ್ನು ಮನಗಾಣಬೇಕು. ಇಂದಿನ ಚಿಗುರು ನಾಳೆ ಬಲಿತು ಮುದಿಎಲೆಯಾಗಲೇಬೇಕೆಂಬ ಪ್ರಕೃತಿ ನಿಯಮ ಇಲ್ಲೆಲ್ಲಾ ಕೆಲಸ ಮಾಡಿರುವುದನ್ನು ಗಮನಿಸಬೇಕು.

ನಮ್ಮ ಸಾಮಾಜಿಕ ಬದುಕಿನಲ್ಲಿ ಸಹನೆ ಅತ್ಯಂತ ಅಮೂಲ್ಯ ಮೌಲ್ಯವಾಗಿ ಕೆಲಸ ಮಾಡಬೇಕಿದೆ. ಕುಟುಂಬದ ವಿಸ್ತೃತರೂಪವೇ ಸಮಾಜ. ಅಲ್ಲಿ ಭಿನ್ನ ಭಿನ್ನ ಭಾಷೆಯ, ಅಭಿರುಚಿಯ, ಸಿದ್ಧಾಂತ ನಂಬಿಕೆಗಳ ಜನಸಮೂಹವೇ ಒಂದಾಗಿ ಸೋದರತ್ವ–ಸಮಾನತೆಯ ಭಾವದಿಂದ ಬದುಕು ಮಾಡುವುದು ಅನಿವಾರ್ಯವಾಗಿರುತ್ತದೆ. ಭಿನ್ನತೆಯೆಂಬ ವೈಯಕ್ತಿಕ ಮೌಲ್ಯವನ್ನು ಜತನವಾಗಿ ತನ್ನಲ್ಲಿ ಮತ್ತು ತನ್ನ ಕುಟುಂಬದಲ್ಲಿ ಕಾಪಾಡಿ, ಆಚರಿಸಿಕೊಂಡು, ಹೊರಗಿನ ಪ್ರಪಂಚದಲ್ಲಿ ಸ್ಥಳೀಯ ಸಂಸ್ಕೃತಿ ಮೌಲ್ಯಗಳ ಪ್ರೀತಿಗಾರನಾಗಿ ಬದುಕುವುದು ಸಹ್ಯಗುಣ, ಈ ಸಹ್ಯಗುಣ ಭಾರತದಂಥ ಭಿನ್ನ ಸಂಸ್ಕೃತಿಗಳ ಒಕ್ಕೂಟ ವ್ಯವಸ್ಥೆಯಲ್ಲಿ ಅತ್ಯಂತ ಆದರ್ಶ ನಡವಳಿಕೆ. ಅದನ್ನು ಬಿಟ್ಟು ತನ್ನ ಭಾಷೆ, ಧರ್ಮ, ಆಹಾರ, ರೀತಿ–ರಿವಾಜು ಸಂಪ್ರದಾಯಗಳು ಮಾತ್ರ ಶ್ರೇಷ್ಠವೆಂದೂ ಮಿಕ್ಕವರದ್ದೆಲ್ಲ ಕನಿಷ್ಠವೆಂದೂ ಹೀಗಳೆದು ವರ್ತಿಸುವುದು ಸಾಮಾಜಿಕ

ಸ್ವಾಸ್ಥ್ಯವನ್ನೂ ಕದಡುತ್ತದೆ. ದುಡಿಯುವ ಸ್ಥಳಗಳಲ್ಲಿ, ಕಲಿಯುವ ಶಾಲೆ–ಕಾಲೇಜುಗಳಲ್ಲಿ, ಸಾರ್ವಜನಿಕ ಆಚರಣೆಗಳಲ್ಲಿ ಸರ್ವಜನ ಸಂಸ್ಕೃತಿಗಳ ಅಭಿವ್ಯಕ್ತಿಗೆ– ಅವಕಾಶವಿರಬೇಕು. ಹಾಗೆ ಅವಕಾಶವಿರುವಂತೆ ಸಹನೆಯಿಂದ ನಡೆದುಕೊಳ್ಳಬೇಕು. ಆಗ ನಮ್ಮ ಒಟ್ಟಾರೆ ಬದುಕು 'ಸರ್ವಜನಾಂಗದ ಶಾಂತಿಯ ತೋಟ'ವಾಗುತ್ತದೆ.

ಸಮಾಜವೆಂಬುದು ಒಂದೇ ಬಗೆಯ ಏಕರೂಪದ ಹೂವಿನ ತೋಟವಲ್ಲ; ಅದು ಬಗೆ ಬಗೆಯ ಬಣ್ಣದ, ವಿವಿಧ ಗಾತ್ರದ, ಆಕಾರದ ಹೂವುಗಳಿಂದ ತುಂಬಿರುವ ಸುಂದರವನ! ಆ ನೆಮ್ಮದಿಯ ಸುಂದರವನವನ್ನು ಅಸಹನೆಯೆಂಬ ಅಹಂಕಾರದ ಅಸಹ್ಯಗುಣದಿಂದ ಧ್ವಂಸಗೊಳಿಸಬಾರದು. ಬಸವಣ್ಣ 'ಅನ್ಯರಿಗೆ ಅಸಹ್ಯಪಡಬೇಡ' ಎಂದು ಹೇಳಿದ ಮಾತಿನಲ್ಲಿ ಜೊತೆಗೂಡಿ ಬಾಳುವ ನಡೆಗೆ ಬೇಕಾದ ತಿಳಿವಳಿಕೆಯ ಪಾಠವಿದೆ. ಇಂದು ತನ್ನ ಧರ್ಮ–ಸಂಪ್ರದಾಯಗಳೇ ಶ್ರೇಷ್ಠ ಮಿಕ್ಕ ನಂಬಿಕೆಗಳೆಲ್ಲಾ ಅದರ ಅಡಿಯಾಳಾಗಿ ಬದುಕಬೇಕು; ಇಲ್ಲವೇ 'ಜಾಗ ಖಾಲಿ'ಮಾಡಬೇಕೆಂಬ ಅಹಂಕಾರದ ಧೋರಣೆ ಜಗತ್ತಿನ ಮತಾವಲಂಬಿಗಳಲ್ಲಿ ಕಾಣುತ್ತಿದೆ. ಬಲಿಷ್ಠರ ನಡುವೆ ದುರ್ಬಲರು ನರಳುತ್ತಿದ್ದಾರೆ. ಮಾನವತೆಗೆ ಕಲ್ಲು ಬೀಳುತ್ತಿದೆ. ಇಂಥ ಸಂದರ್ಭದಲ್ಲಿ ತಮ್ಮ ಎಲ್ಲ ಮತ, ಭಾಷೆ, ಮಡಿ, ಧಿರಿಸು, ಸಂಬಂಧ–ಮುಂತಾದ ಅಹಂಕಾರಗಳನ್ನು ತ್ಯಜಿಸಿ, ಪಾಳು ಗುಡಿಯಲ್ಲಿ ಮಲಗಿ, ಸಿಕ್ಕಿದ್ದನ್ನು ತಿಂದು ಲೋಕಜ್ಞಾನವನ್ನು ಅರಸುತ್ತಿದ್ದ ನಮ್ಮ ಸಂತ–ಫಕೀರರು ಆದರ್ಶವಾಗಬೇಕು.

**■ ಶಿಕಾಕು**

## ಮಾತೇ ಮುತ್ತು

★ ಹುಣ್ಣಿಮೆಯ ಹೊಂಬೆಳಕು; ಹನಿಯಲ್ಲಿ ಒಂದು ಹೊಳೆ. ಕವಿತೆ ಮೂಡುವ ತನಕ ನಾವು ಕಾದಿರಬೇಕು.

– ಕೆ. ಎಸ್. ನರಸಿಂಹ ಸ್ವಾಮಿ

★ ಕ್ರಿಯೆ ಎಲ್ಲ ಕಾಲಕ್ಕೂ ಸಂತೋಷ ತಂದು ಕೊಡಲಿಕ್ಕಿಲ್ಲ. ಆದರೆ ಸಂತೋಷವಿಲ್ಲದ ಕ್ರಿಯೆ ಇಲ್ಲ.

-ಬೆಂಜಮಿನ್ ಡಿಸ್ರೇಲಿ

★ ಶಿಕ್ಷಣದ ಕಟ್ಟಡವನ್ನು ಕನ್ನಡದ ಇಟ್ಟಿಗೆಗಳಿಂದ ಕಟ್ಟಿ: ಅದು ಗಟ್ಟಿ.

-ಕುವೆಂಪು

★ ಎಲ್ಲರನ್ನೂ ಹೊಗಳುವವನು ಯಾರನ್ನೂ ಹೊಗಳಿದಂತಲ್ಲ.

-ಸ್ಯಾಮುವೆಲ್ ಜಾನ್‌ಸನ್

★ ನೀವು ಎಲ್ಲಿದ್ದೀರೋ, ನಿಮ್ಮ ಹತ್ತಿರ ಏನು ಸಾಧನಗಳಿವೆಯೋ, ಅದನ್ನೇ ಉಪಯೋಗಿಸಿ ನಿಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಕೆಲಸ ಮಾಡಿ.

-ಥಿಯೋಡಾರ್ ರೂಸ್‌ವೆಲ್ಟ್

★ ಹಣವನ್ನು ನಾನು ದ್ವೇಷಿಸುತ್ತೇನೆ. ಆದರೆ ಅದಕ್ಕಿಂತ ಹೆಚ್ಚಾಗಿ ಹಣದ ಕೊರತೆಯನ್ನು ದ್ವೇಷಿಸುತ್ತೇನೆ.

-ಸ್ಯಾಮುವೆಲ್ ಮ್ಯಾನ್ಸ್‌ಫೀಲ್ಡ್

★ ರಾಜ್ಯವೊಂದನ್ನು ಕಟ್ಟಲು ಸಾವಿರ ವರ್ಷಗಳು ಬೇಕಾಗಬಹುದು. ಆದರೆ ಅದನ್ನು ನಾಶ ಮಾಡಲು ಒಂದು ಗಂಟೆ ಸಾಕು.

-ಲಾರ್ಡ್ ಬೈರನ್

★ ಬಹುತೇಕ ಜನರಿಗೆ ಹಣ ಹೇಗೆ ಮಾಡುವುದೆಂದು ಗೊತ್ತಿದೆ. ಆದರೆ ಲಕ್ಷದಲ್ಲಿ ಒಬ್ಬನಿಗೂ ಅದನ್ನು ಹೇಗೆ ಖರ್ಚು ಮಾಡುವುದೆಂದು ಗೊತ್ತಿಲ್ಲ.

-ಹೆನ್ರಿ ಡೇವಿಡ್ ಥೋರೊ

★ ಹೆತ್ತವರಿಗೆ ಗೌರವ ಕೊಡದ ಮಕ್ಕಳು ಜಗತ್ತಿನಲ್ಲಿ ಇನ್ನಾರಿಗೂ ಗೌರವ ಕೊಡಲು ಸಾಧ್ಯವಿಲ್ಲ.

-ಬಿಲ್ಲಿ ಗ್ರಹಾಂ

★ ಜವಾಬ್ದಾರಿಯುತನಾಗಿದ್ದು ತಪ್ಪು ಮಾಡುವುದಕ್ಕಿಂತ ಬೇಜವಾಬ್ದಾರಿಯವನಾಗಿದ್ದು ಸರಿಯಾದದ್ದನ್ನು ಮಾಡುವುದು ಒಳ್ಳೆಯದು.

-ವಿನ್‌ಸ್ಟನ್ ಚರ್ಚಿಲ್